




ಟುಲಿಪ್ ಅಮೆರಿಕನ್ನರ ಇಷ್ಟದ ಹೂವು. ಮಾರ್ಚ್–ಏಪ್ರಿಲ್ ತಿಂಗಳು ಇದರ ಭರಾಟೆ ಜೋರು. ಮನೆಗಳ ಮುಂದೆ ಮೋಹಕವಾಗಿಯೂ, ರಾಜ ಬೀದಿಯಲ್ಲೂ ರಾರಾಜಿಸುತ್ತವೆ. ಇದು ಯೂರೇಷಿಯನ್ ಮತ್ತು ಉತ್ತರ ಆಫ್ರಿಕಾದ ತಳಿ.

ಒರೆಗಾನ್ ರಾಜ್ಯದ ಪೋರ್ಟ್‌ಲ್ಯಾಂಡ್‌ನಿಂದ ವಾಹನದಲ್ಲಿ 45 ನಿಮಿಷಗಳಷ್ಟು ದಾರಿ ಸಾಗಿದರೆ ಸಿಗುವ ವುಡ್ಬರ್ನ್ ಎಂಬುದೊಂದು ಊರಿನಲ್ಲಿ ಟುಲಿಪ್‌ನ ಬೃಹತ್ ತೋಟವಿದೆ. ಅಲ್ಲಿನ ಟುಲಿಪ್ ಹೂವುಗಳ ಸೊಬಗಿಗೆ ಮನಸೋಲದವರೇ ಇಲ್ಲ. ನೋಡಿ ಖುಷಿ ಪಡಲು ಜನ ತಂಡೋಪತಂಡವಾಗಿ ನಸುಕಿನಲ್ಲೇ ಹೋಗುತ್ತಾರೆ. ಮೈ ಕೊರೆಯುವ ಚಳಿಯಲ್ಲಿ ತಲೆಯಿಂದ ಕಾಲಿನ ತನಕ ಉಣ್ಣೆ ಉಡುಪು ಧರಿಸಿ ಕ್ಯಾಮೆರಾದೊಂದಿಗೆ ಸೂರ್ಯೋದಯದ ಚೆಲುವಿನೊಂದಿಗೆ ಕಣ್ ಸೆಳೆಯೋ ಹೂವಿನ ಸೌಂದರ್ಯ ಸೆರೆಹಿಡಿಯಲು ಕಾತರಿಸುತ್ತಾರೆ. ಕೆಲವರಂತೂ 'ಡ್ರೋಣ್'ಗಳನ್ನು ಹಾರಾಡಿಸಿ ಅದರಲ್ಲಿ ಜೋಡಿಸಿದ ಕ್ಯಾಮೆರಾಗಳಿಂದ ಫೋಟೋಗಳನ್ನು ಸೆರೆಹಿಡಿದು ಸಂಭ್ರಮಿಸುತ್ತಾರೆ.

ಹಲಸು, ಮಾವು, ಬಾಳೆ, ಸೇಬು, ನೇರಳೆ, ಕಿತ್ತಳೆ, ಹರಳೆಯ ನೈಜ ಬಣ್ಣದಲ್ಲಿ ಅದ್ದೂರಿಯಾಗಿ ಹುಲುಸಾಗಿ ಬೆಳೆದು ಈ ಟುಲಿಪ್‌ಗಳು ಕಂಗೊಳಿಸುತ್ತವೆ. ದೃಷ್ಟಿ ಹರಿದಷ್ಟು ದೂರಕ್ಕೂ ಹೂವುಗಳದೇ ಮೈದಾನ. ಬಣ್ಣ ಬಣ್ಣದ ಹೂವುಗಳನ್ನು ಒಪ್ಪವಾಗಿ ಸಾಲು ಸಾಲಾಗಿ ಬೆಳೆಸಿರುತ್ತಾರೆ. ಸುರಿಯುವ ಹಿಮದಲ್ಲಿ ತೊಯ್ದ ಹೂವುಗಳು ಬಣ್ಣ ಬಣ್ಣದ ರತ್ನಗಂಬಳಿ ಹಾಸಿದಂತೆ ಕಾಣಿಸುತ್ತವೆ.

ಬಿಸಿಲಿನ ಆಗಮನವಾಗುತ್ತಿದ್ದಂತೆಯೇ ಈ ಹೂಗಳ ಚೆಲುವು ಬದಲಾಗುತ್ತದೆ. ನೋಡ ನೋಡುತ್ತಿದ್ದಂತೆಯೇ ಬದಲಾಗುವ ಹೂವುಗಳ ಸೊಬಗು ಕಣ್ಮನಗಳಿಗೆ ಹಬ್ಬ. ಜನ ಹಲವು ಬಗೆಯಲ್ಲಿ ತಮ್ಮ ಸಂತೋಷ ವ್ಯಕ್ತಪಡಿಸುತ್ತ ಕೇಕೆ ಹಾಕುತ್ತಾರೆ. ಒಂದೇ ಜಾತಿಯ ಹಲವಾರು ಬಣ್ಣದ ಹೂಗಳು, ಬಣ್ಣ ಬಣ್ಣದ ದೀಪಗಳಂತೆ ಗೋಚರಿಸುತ್ತವೆ.

ಟುಲಿಪ್ ಹೂವುಗಳನ್ನು ಬೆಳೆಸುವುದು ದೊಡ್ಡ ಉದ್ಯಮವೇ ಆಗಿದೆ. ಇದರಿಂದ ಸಾಕಷ್ಟು ವರಮಾನವೂ ಇದೆ. ಹೂವಿನ ಮಾರಾಟ ಪ್ರವೇಶಕ್ಕೆ ಟಿಕೆಟ್, ಮಕ್ಕಳ ಮನರಂಜನೆಗೆ, ಹಾಟ್ ಏರ್ ಬಲೂನಿನಲ್ಲಿ ಕುಳಿತು ಎತ್ತರಕ್ಕೆ ಹಾರಿ ಅಲ್ಲಿಂದಲೇ ಕೆಳಗಿನ ಹೂವಿನ ರಾಶಿ ನೋಟಕ್ಕೆ ಹಣ ಕೊಡಬೇಕು. ಕೋಟಿ ಕೋಟಿ ಹೂಗಳ ಸೊಬಗಿನ ಮುಂದೆ ಹಣಕ್ಕೇನು ಬೆಲೆ? ಹೂವಿನ ಸೌಂದರ್ಯ ವೀಕ್ಷಣೆಗೆ ಇರುವ ಸವಲತ್ತುಗಳಲ್ಲಿ ತಿಂಡಿ ಪದಾರ್ಥಗಳ ಸ್ಟಾಲ್‌ಗಳು, ರೆಸ್ಟೋರೆಂಟ್‌ಗಳು, ರೂಮ್‌ಗಳು, ಕಾರ್ ಪಾರ್ಕಿಂಗ್ ಇತ್ಯಾದಿ ಸೇರಿವೆ.

ಇಲ್ಲಿನ ಕುಟುಂಬವೊಂದು 1950ರಿಂದ ಸುಮಾರು 40 ಎಕರೆಯಲ್ಲಿ ಕೃಷಿ ಮಾಡುತ್ತಿತ್ತು. ಅವರು 1974ರಲ್ಲಿ ಮೊದಲ ಬಾರಿಗೆ ಟುಲಿಪ್ ಬೆಳೆಯಲಾರಂಭಿಸಿದರು. 80ರ ದಶಕದಲ್ಲಿ 15 ಎಕರೆಯಷ್ಟು ಜಾಗದಲ್ಲಿ ಟುಲಿಪ್ ಹೂವಿನ ಕೃಷಿ ನಡೆಯಿತು. 1983ರಿಂದ ಕಂಪೆನಿಯನ್ನೇ ಆರಂಭಿಸಿದರು. ಈಗ ಅದು ಉದ್ಯಮವಾಗಿ ಬೆಳೆದುನಿಂತಿದೆ. ಮಾರ್ಚ್ ಕೊನೆಯ ವಾರದಲ್ಲಿ ಟುಲಿಪ್ ಹೂವಿನ ಜಾತ್ರೆಗೆ ಭಾರೀ ಜನ ಸೇರುತ್ತಾರೆ.

ಹೂವಿನ ರಾಶಿಯ ನಡುವೆ ಸಮಯ ಸರಿದದ್ದೇ ಗೊತ್ತಾಗುವುದಿಲ್ಲ. ಯುವ ಜೋಡಿಗಳಂತೂ ಹೂವಿನ ಮಧ್ಯೆ ನಿಂತು ಸೆಲ್ಫಿ ತೆಗೆಯುವ ಸಂಭ್ರಮದಲ್ಲಿ ಮುಳುಗಿರುತ್ತಾರೆ. 21 ವರ್ಷ ದಾಟಿದವರಿಗೆ ವೈನ್ ಸವಿಯುವ ಅವಕಾಶವೂ ಇಲ್ಲಿದೆ. ಈ ಹೂವಿನ ಗಿಡ ಒಮ್ಮೆ ನೆಟ್ಟರೆ ಸಾಕು, ಮತ್ತೆ ಮತ್ತೆ ಸಕಾಲದಲ್ಲಿ ಹೂ ಬಿಟ್ಟು ಕಂಗೊಳಿಸುತ್ತವೆ. ಒಂದರಿಂದ ಎರಡು ಅಡಿ ಎತ್ತರ ಬೆಳೆಯುವ ಈ ಗಿಡದ ಎಲೆಗಳು ಗರಿಗಳಂತೆ ಉದ್ದುದ್ದವಾಗಿರುತ್ತವೆ. ಒಂದು ರೆಂಬೆಗೆ ಒಂದೇ ಹೂ ಬಿಟ್ಟರೂ ಆಕರ್ಷಣೆ ಮಾತ್ರ ಅಮೋಘ.